# ಗೋಳಾಕಾರದ ಮೊಟ್ಟೆ





ಈ ಚಿತ್ರದಲ್ಲಿರುವ ಮೊಟ್ಟೆಯನ್ನೊಮ್ಮೆ ನೋಡಿ. ನೋಡಲು ಚೆಂಡಿನಂತೆ ಕಾಣುವ ಇದನ್ನು ಕೋಳಿ ಮೊಟ್ಟೆ ಎಂದರೆ ನಂಬುತ್ತೀರಾ? ಆಶ್ಚರ್ಯವಾದರೂ ಸತ್ಯ. ಸಾವಿರ ಕೋಟಿಗಳಲ್ಲಿ ಒಂದು ಎನ್ನಬಹುದಾದ ಅತೀ ಅಪರೂಪದ ಮೊಟ್ಟೆ ಇದು!

ಲಂಡನ್‌ನಲ್ಲಿರುವ 'ಬ್ರಿಸ್ಟನ್ ಹೋಟೆಲ್'ನಲ್ಲಿ ಕೆಲಸ ಮಾಡುತ್ತಿರುವ ಜೇಮ್ಸ್ ಚರ್ಚ್ ಉಪಹಾರ ಸಿದ್ಧಪಡಿಸಲೆಂದು ಮೊಟ್ಟೆಗಳ ಬಾಕ್ಸ್ ತೆರೆದಾಗ ಈ ಮೊಟ್ಟೆ ಇತರ ಮೊಟ್ಟೆಗಳಂತೆ ಅಂಡಾಕಾರವಿರದೆ, ಗೋಳಾಕಾರವಿರುವುದನ್ನು ಕಂಡು ಆಶ್ಚರ್ಯವಾಯಿತಂತೆ. 'ಸಹೋದ್ಯೋಗಿಗಳಿಗೆ ತೋರಿಸಿದಾಗ ಅವರು ವಿಸ್ಮಯಗೊಂಡರು' ಎನ್ನುತ್ತಾನೆ ಜೇಮ್ಸ್.

'ಕಳೆದ ಹತ್ತು ವರ್ಷಗಳಿಂದ ಬಾಣಸಿಗನಾಗಿ ಕೆಲಸ ಮಾಡುತ್ತಿದ್ದೇನೆ. ಇದುವರೆಗೂ ಒಂದು ಲಕ್ಷಕ್ಕೂ ಹೆಚ್ಚು ಮೊಟ್ಟೆಯನ್ನು ಒಡೆದು ಅತಿಥಿಗಳಿಗೆ ಉಪಹಾರ ಸಿದ್ಧಪಡಿಸಿದ್ದೇನೆ. ಆದರೆ ಸಂಪೂರ್ಣ ಗೋಳಾಕಾರದ ಮೊಟ್ಟೆ ನೋಡೇ ಇರಲಿಲ್ಲ. ಸದ್ಯ ಇದನ್ನು ನಾನು ಒಡೆಯಲಿಲ್ಲ. ಇದನ್ನು ಹೀಗೆ ಜೋಪಾನವಾಗಿರಿಸುತ್ತೇನೆ' ಎಂದು ಸಂತಸದಿಂದ ನುಡಿಯುತ್ತಾನೆ. ಎರಡೂವರೆ ಇಂಚಿನ ಈ ಮೊಟ್ಟೆಯನ್ನು ಈತ ಪ್ಲಾಸ್ಟಿಕ್ ಕವರಿನಲ್ಲಿ ಸುತ್ತಿ ತನ್ನ ಫ್ರಿಜ್‌ನಲ್ಲಿ ಸಂರಕ್ಷಿಸಿಟ್ಟಿದ್ದಾನೆ.

■ ವಿದ್ಯಾ ವಿ ಹಾಲಭಾವಿ

